ಅಖಂಡ ಪ್ರಕಟಣೆಯ
೨೭ ನೇ ವರ್ಷದಲ್ಲಿ

# ಸ್ಫೂರ್ತಿ

ಅಕ್ಟೋಬರ್, ೧೯೯೪.
ಬೆಲೆ ರೂ. ೨-೫೦.















ಓದಿ ಕಾಯ್ದಿರಿಸುವಂಥ ವಿಷಯಗಳು ಇದರಲ್ಲಿವೆ.

## ಪ್ರೀತಿಯೆ ಹಿಗ್ಗನು ತರಲಿ !

ಬಯಸಿದ ಹೆಣ್ಣು
ಗಂಡಿಗೆ ದೊರೆಯಲಿ
ಬಯಸಿದ ಗಂಡು
ಹೆಣ್ಣಿಗೆ ದೊರೆಯಲಿ
ಇಬ್ಬರಿಗೂ ನಿಜ
ಪ್ರೀತಿಯು ದೊರೆಯಲಿ
ಪ್ರೀತಿಯೆ ಹಿಗ್ಗನು ತರಲಿ
ಬದುಕಿಗೆ ಸುಗ್ಗಿಯು ಬರಲಿ !

ಬಯಸದ ಸತಿಯನೆ
ಪತಿಯು ಪ್ರೀತಿಸಲಿ
ಬಯಸದೆ ಪತಿಯನೆ
ಸತಿಯು ಪ್ರೀತಿಸಲಿ
ಇಬ್ಬರಿಗೂ ಸಂ-
ಪ್ರೀತಿಯು ದೊರೆಯಲಿ
ಪ್ರೀತಿಯೆ ಹಿಗ್ಗನು ತರಲಿ
ಬದುಕಿಗೆ ಸಗ್ಗವು ಬರಲಿ !

ಪ್ರೀತಿಯೆ ಎಲ್ಲರ
ಬನ್ನವನಳಿಸಲಿ
ಪ್ರೀತಿಯೆ ಅನ್ಯರ
ತನ್ನವರೆನಿಸಲಿ
ಪ್ರೀತಿಯೆ ವಿರಸವ
ಸರಸಗೊಳಿಸಲಿ
ಪ್ರೀತಿಯೆ ಹಿಗ್ಗನು ತರಲಿ
ಬದುಕಿಗೆ ಭಾಗ್ಯವು ಬರಲಿ !



—ರಚನೆ—
ಡಾ|| ಸಿದ್ಧಯ್ಯ ಪುರಾಣಿಕ
ಬೆಂಗಳೂರು

ಪ್ರೀತಿಯ ಹೂವು
ಮಧುವನು ಕೊಡಲಿ
ಪ್ರೀತಿಯ ಮಾವು
ಫಲವನು ಬಿಡಲಿ
ಪ್ರೀತಿಯೆ ದ್ವೇಷವ
ವೈರವ ಸುಡಲಿ
ಪ್ರೀತಿಯೆ ಹಿಗ್ಗನು ತರಲಿ,
ಬದುಕಿಗೆ ಸುಗ್ಗಿಯು ಬರಲಿ !

ಹಾಗೂ ಸೌಜನ್ಯಪೂರ್ಣ ನಡೆ-ನುಡಿಗಳು ಸ್ಮರಣೆಯಲ್ಲಿ ಉಳಿದಂಥವುಗಳು.

'ಸ್ಫೂರ್ತಿ' ಯ ವಿಶೇಷಾಂಕಗಳಿಗೆ ಕವನ ಕಳಿಸಲು ನಾವು ಬರೆದಾಗಲೆಲ್ಲ, ಮೆಚ್ಚುಗೆಯ ನುಡಿಗಳೊಂದಿಗೆ 'ಸ್ಫೂರ್ತಿ' ಯ ಬೆನ್ನು ಚಪ್ಪರಿಸಿ ಅವರು ತಮ್ಮ ಕವನ ಕಳಿಸುವುದು ಸಾಗಿ ಬಂದಿದ್ದಿತು.

"ಸ್ಫೂರ್ತಿ" ಗಾಗಿ ಇತ್ತೀಚೆಗೆ ಅವರು ಕಳಿಸಿದ್ದ ಕವನವನ್ನು, ಅವರ ಅಗಲುವಿಕೆ-ಯಿಂದಾಗಿ, ಈ ಸಂಚಿಕೆಯಲ್ಲೇ ಪ್ರಕಟಿಸು-ವುದರೊಂದಿಗೆ, ಅವರ ಆತ್ಮಕ್ಕೆ ಪರಮಾ-ತ್ಮನು ಚಿರಶಾಂತಿಯನ್ನೀಯಲೆಂದು ಕೋರುತ್ತೇವೆ. ●

—ಕೆ. ಎಲ್. ಅಣ್ಣಿಗೇರಿ